ವಿಶೇಷ ಘಟಕ ಯೋಜನೆಯಡಿಯಲ್ಲಿ ಅರಣ್ಯ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ವರ್ಗದವರ ಕಲ್ಯಾಣಕ್ಕಾಗಿ ಹಾಕಿಕೊಂಡಿರುವ ಕಾರ್ಯಕ್ರಮದ ಬಗ್ಗೆ

೩೪೫ (೫೫೮) ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ವಿಶೇಷ ಘಟಕ ಯೋಜನೆಯಡಿಯಲ್ಲಿ ಅರಣ್ಯ ಇಲಾಖೆಯಲ್ಲಿ ಪರಿಶಿಷ್ಟ ಜಾತಿ: ವರ್ಗದವರ ಕಲ್ಯಾಣಕ್ಕಾಗಿ ಕಾರ್ಯಕ್ರಮ ಹಾಕಿಕೊಂಡಿರುವುದು ನಿಜವೇ ?

ಆ) ಒದಗಿಸಲಾದ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆ ?

ಇ) ಈ ಯೋಜನೆಗಳನ್ನು ಸರಿಯಾಗಿ ಕಾರ್ಯಗತಗೊಳಿಸಲಾಗುತ್ತಿಲ್ಲ ಎಂಬುದು ನಿಜವೆ ?

ಈ) ಹಾಗಿದ್ದರೆ ಕಾರ್ಯಕ್ರಮವನ್ನು ಸರಿಯಾಗಿ ಕಾರ್ಯರೂಪಕ್ಕೆ ತರಲು ಸರ್ಕಾರದ ಉದ್ದೇಶಿತ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು.

ಆ) ೧೯೮೮–೮೯ರಲ್ಲಿ ವಿಶೇಷ ಘಟಕ ಯೋಜನೆ ರಾಜ್ಯ ಹಾಗೂ ಕೇಂದ್ರ ಘಟಕಗಳಲ್ಲಿ ಒಟ್ಟು ರೂ. ೧೦೧.೧೦೧ ಲಕ್ಷ ವೆಚ್ಚದಲ್ಲಿ ರಾಜ್ಯದ ೨೦ ಜಿಲ್ಲೆಗಳಲ್ಲೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಗಳ ಪ್ರಕಾರ ಒಟ್ಟು ೬೧೦೭ ಫಲಾನುಭವಿಗಳನ್ನು ಗುರುತಿಸಲಾಗಿದೆ. ಈ ಯೋಜನೆಯಡಿಯಲ್ಲಿ ಉಚಿತವಾಗಿ ಸಸ್ಯಗಳನ್ನು ಹಂಚುವುದು, ಸಾಮಾಜಿಕ ಭದ್ರತಾ ನೆಡುತೋಪುಗಳನ್ನು ಬೆಳೆಸುವುದು ಮತ್ತು ವಿಕೇಂದ್ರೀಕೃತ ಸಸ್ಯ ಕ್ಷೇತ್ರಗಳನ್ನು ಕೈಗೊಳ್ಳುವುದು ಸೇರಿದೆ. ಇದಲ್ಲದೆ ಹೊಗೆರಹಿತ ಚುಲಾಗಳನ್ನು ಹಂಚಲಾಗುವುದು.

ಇ) ನಿಜವಲ್ಲ.

ಈ) ಉದ್ಭವಿಸುವುದಿಲ್ಲ.

ಹೆಬ್ರಿವಲಯ ಅರಣ್ಯ ಅಧಿಕಾರಿಯವರ ಕಛೇರಿಯಲ್ಲಿ ದಾಖಲಾದ ಪ್ರಕರಣಗಳು

೩೫೩ (೬೯೭) ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಹೆಬ್ರಿವಲಯ ಅರಣ್ಯಾಧಿಕಾರಿಯವರ ಕಛೇರಿಯಿಂದ ಸರಕಾರಿ ಸ್ಥಳಗಳಿಂದ ಅಕ್ರಮ ಕಡಿತ ಓ. ಆರ್. ನಂ. ೯೦:೮೮ ಮತ್ತು ಓ. ಆರ್. ನಂ. ೧೧೩ :೮೮ ಮತ್ತು ಓ. ಆರ್. ನಂ. ೧೧೬:೮೮–೮೯ಗಳಲ್ಲಿ ಸ್ವಾಧೀನ ಪಡಿಸಿಕೊಂಡ ಸ್ವತ್ತುಗಳ ಪ್ರತ್ಯೇಕ ವಿವರಗಳನ್ನು ಒದಗಿಸುವುದು.

ಆ) ಓ. ಆರ್. ನಂ. ೯೦:೮೮ ಮತ್ತು ಓ. ಆರ್. ನಂ. ೧೧೩:೮೮ ಮತ್ತು ಓ. ಆರ್. ನಂ. ೧೧೬:೮೮–೮೯ರ ಸ್ಥಳದ ಮತ್ತು ತಕ್ಷೀರುಗಾರರ ಸಂಪೂರ್ಣ ವಿಳಾಸ ಮತ್ತು ತಕ್ಷೀರು ದಾಖಲು ಮಾಡಿದ ದಿನಾಂಕಗಳ ವಿವರದ ಮಾಹಿತಿಯೊದಗಿಸುವುದು ?

ಇ) ಓ. ಆರ್. ನಂ. ೯೦–೮೮ ಮತ್ತು ೧೧೩:೮೮ ಮತ್ತು ಓ. ಆರ್. ನಂ. ೧೧೬:೮೮–೮೯ರ ಮಾಲನ್ನು ಹೆಬ್ರಿವಲಯ ಅರಣ್ಯಾಧಿಕಾರಿಗಳ ಕಛೇರಿಗೆ ತಂದ ಮಾಲುಗಳ ವಿವರ ಪಿ. ಎಫ್. ಟಿ. ಯಂತೆ ಮತ್ತು ಈ ಮಾಲುಗಳ ಹರಾಜಿನಿಂದ ಸರಕಾರಿ ಬೊಕ್ಕಸಕ್ಕೆ ಜಮಾ ಆದ ಹಣವೆಷ್ಟು ?